MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 23-12-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಜೀರಿಗೆ ದರ ತೀವ್ರ ಹೆಚ್ಚಳ

ದೇಶೀ ಹಾಗೂ ಜಾಗತಿಕ ಬೇಡಿಕೆ ಹೆಚ್ಚಳದಿಂದ ಕಳೆದೊಂದು ವಾರದಲ್ಲಿ ಜೀರಿಗೆ ದರ ತೀವ್ರ ಹೆಚ್ಚಳವಾಗಿದೆಯೆನ್ನಲಾಗಿದೆ. 20 ಕೆ.ಜಿ. ಚೀಲಕ್ಕೆ ರೂ.300 ರಿಂದ 400 ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಪ್ರಮುಖ ಬೆಳೆಯುವ ರಾಜ್ಯಗಳಾದ ಗುಜರಾತ್ ಹಾಗೂ ರಾಜಸ್ಥಾನಗಳಲ್ಲಿ ಬಿತ್ತನೆ ಇಳಿಕೆ ಹಾಗೂ ಹವಾಮಾನ ವೈಪರೀತ್ಯದಿಂದ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿಂದ ದರ ಹೆಚ್ಚಳದಲ್ಲೇ ಮುಂದುವರಿಯುವ ಸಾಧ್ಯತೆಯಿದೆಯೆನ್ನಲಾಗಿದೆ. ದಾಸ್ತಾನು ಕೂಡಾ ಇಳಿಕೆಯಾಗಿದ್ದು 55 ಕೆ.ಜಿ ಯ 1.50 ಮಿಲಿಯನ್ ಚೀಲಗಳಲ್ಲಿ ಈಗಾಗಲೇ ಅರ್ಧಾಂಶ ಬಿಕರಿಯಾಗಿದೆಯೆನ್ನಲಾಗಿದೆ. ಹೊಸ ಬೆಳೆಯ ಆವಕ ಫೆಬ್ರವರಿ 2023 ರಿಂದ ಆರಂಭವಾಗಬಹುದೆನ್ನಲಾಗಿದೆ. ಇತರ ಜಾಗತಿಕ ಉತ್ಪಾದಕ ದೇಶಗಳಾದ ಟರ್ಕಿ ಹಾಗೂ ಸಿರಿಯಾಗಳ ಉತ್ಪಾದನೆಯ ಹೆಚ್ಚಿನಂಶ ಈಗಾಗಲೇ ರಫ್ತಾಗಿದ್ದು, ಭಾರತದ ಜೀರಿಗೆ ರಫ್ತು ಬೇಡಿಕೆ ಹೆಚ್ಚಳವಾಗಲಿದೆಯೆನ್ನಲಾಗಿದೆ. ಈ ವರ್ಷದ ಉತ್ಪಾದನೆ ಹಿಂದಿನ ವರ್ಷದ ಉತ್ಪಾದನೆಯಾದ 5 ಮಿಲಿಯನ್ ಚೀಲಗಳಿಗಿಂತ ಇಳಿಕೆಯಾಗಬಹುದೆನ್ನಲಾಗಿದೆ.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಮತ್ತೆ ಇಳಿಕೆ

ಬೇಡಿಕೆ ಇಳಿಕೆಯಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಮತ್ತೆ 1.69 ಶೇಕಡಾ ಇಳಿಕೆ ಟನ್‌ಗೆ 3832 ರಿಂಗಿಟ್ಸ್ ($ 865.99) ಆಗಿದೆ. ಈ ವಾರ ಒಟ್ಟು 2.25 ಶೇಕಡಾ ಇಳಿಕೆಯಾಗಿದೆ.